ಆಗುತ್ತದೆ. ಐದು ವರ್ಷಗಳ ಅವಧಿಗೆ ರೂ.6062 ಬಡ್ಡಿ ರೂಪದಲ್ಲಿ ನಿಮ್ಮ ಉಳಿತಾಯದ ಮೊತ್ತಕ್ಕೆ ಸೇರಿಸಿ ಒಟ್ಟು ರೂ.36,062 ಮೊತ್ತವು ನಿಮಗೆ ದೊರೆಯುತ್ತದೆ.

ಜೀವ ವಿಮೆ: ಉಳಿತಾಯದ ಹಲವು ವಿಧಗಳಲ್ಲಿ ಜೀವ ವಿಮೆಗೆ ಪ್ರಥಮ ಪ್ರಾಶಸ್ತ್ಯ. ಜೀವ ವಿಮೆಯು ನಿರಂತರ ಉಳಿತಾಯ ಹಾಗೂ ಕುಟುಂಬಕ್ಕೆ ಆರ್ಥಿಕ ಭದ್ರತೆಯನ್ನು ನೀಡುವ ಬಹೂಪಯೋಗಿ ಮಾರ್ಗವಾಗಿದೆ. ಜೀವ ವಿಮೆ ಪಡೆಯಲು ವಯಸ್ಸಿನ ನಿರ್ಬಂಧವಿದೆ ಹಾಗೂ ನಿರ್ಧರಿಸಿದ ಪ್ರಿಮಿಯಂ ಪಾವತಿಸಲು ಸಶಕ್ತರಾಗಿರಬೇಕು. ಹಾಗಾಗಿ ವಯಸ್ಸಿನ ಮಿತಿಯೊಳಗೆ ಸಾಕಷ್ಟು ಮೊತ್ತದ ಜೀವ ವಿಮೆ ಪಡೆದು ಕುಟುಂಬಕ್ಕೆ ಆರ್ಥಿಕ ಭದ್ರತೆ ನೀಡುವುದು ಅವಶ್ಯ. ವಾರ್ಷಿಕ ಆದಾಯದ ಕನಿಷ್ಠ 5ರಿಂದ 8 ಪಟ್ಟು ಜೀವ ವಿಮೆ ಇರುವುದು ಒಳ್ಳೆಯದು.

## ಜೀವ ವಿಮೆಯ ಇನ್ನಷ್ಟು ಪ್ರಯೋಜನಗಳು

★ ನಿರಂತರ ಉಳಿತಾಯದ ಹವ್ಯಾಸ. ಮಾಸಿಕ, ತ್ರೈಮಾಸಿಕ, ಅರ್ಧ ವಾರ್ಷಿಕ ಅಥವಾ ವಾರ್ಷಿಕವಾಗಿ ಪ್ರೀಮಿಯಂ ತುಂಬಬಹುದು.

★ ನಿರ್ದಿಷ್ಟ ಅವಧಿಯನ್ನು ನಿರ್ಧರಿಸಿ ಪಾಲಿಸಿಯನ್ನು ಪಡೆಯುವದರಿಂದ, ಅವಧಿಯ ನಂತರ ಮೆಚೂರಿಟಿ ಮೊತ್ತವನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅಥವಾ ಮದುವೆ ಮುಂತಾದ ಉದ್ದೇಶಗಳಿಗೆ ಬಳಸಬಹುದು.

★ ದೀರ್ಘಕಾಲದ ಜೀವ ವಿಮೆಯ ಮೆಚೂರಿಟಿ ಸಂದರ್ಭದಲ್ಲಿ ವಿಮಾ ಮೊತ್ತ ಮತ್ತು ಬೋನಸ್ ಸೇರಿ ಆಕರ್ಷಕ ಮೊತ್ತವು ಆದಾಯ ತೆರಿಗೆಯ ವಿನಾಯಿತಿಯೊಂದಿಗೆ ಕೈ ಸೇರುತ್ತದೆ.

★ ಪ್ರೀಮಿಯಂ ಪಾವತಿಸುವ ಅವಧಿಯಲ್ಲಿ ವಾರ್ಷಿಕವಾಗಿ ಆದಾಯ ತೆರಿಗೆ ವಿನಾಯಿತಿ ಪಡೆಯಬಹುದು.

★ ಹಣಕಾಸಿನ ನೆರವು ಬೇಕೆನಿಸಿದಾಗ ಪಾಲಿಸಿಯ ಮೇಲೆ ಸಾಲ ಸೌಲಭ್ಯ ಪಡೆಯಬಹುದು.

ಜೀವ ವಿಮೆಯಲ್ಲಿ ಹಲವು ಯೋಜನೆಗಳಿವೆ. ಅವುಗಳಲ್ಲಿ ಎಂಡೋಮೆಂಟ್ ಪಾಲಿಸಿ, ಮನಿಬ್ಯಾಕ್ ಪಾಲಿಸಿ, ಮಕ್ಕಳಿಗಾಗಿ ಇರುವ ನಿರಂತರ ಪ್ರಿಮಿಯಂ ಪಾವತಿಸುವ ಅಥವಾ ಏಕಕಂತಿನಲ್ಲಿ ಪಾವತಿಸುವ ಯೋಜನೆಗಳು, ಆರೋಗ್ಯ ವಿಮಾ ಯೋಜನೆಗಳು, ಪಿಂಚಣಿ ವಿಮಾ ಯೋಜನೆಗಳು ಹೀಗೆ ಹಲವಾರು ಯೋಜನೆಗಳಿವೆ.

ಬ್ಯಾಂಕ್ ಠೇವಣಿ: ಕೈಯಲ್ಲಿ ಸ್ವಲ್ಪ ಮೊತ್ತವಿದ್ದರೆ ಥಟ್ಟನೆ ನೆನಪಿಗೆ ಬರುವುದು ಬ್ಯಾಂಕ್‌ನಲ್ಲಿ ಠೇವಣಿಯಾಗಿ ಇಡುವುದು. ಹೌದು, ಎಷ್ಟೋ ಜನರಿಗೆ ಇದರಿಂದ ಪ್ರಯೋಜನವಾಗುತ್ತಿದೆ. ತುರ್ತು ಸಂದರ್ಭಕ್ಕೆ ಬೇಕೆಂದಾಗ ಬಳಸಿಕೊಳ್ಳಲು ಸುಲಭವಾದ ಉಳಿತಾಯದ ಮಾರ್ಗ. ಖಚಿತ ಬಡ್ಡಿ ಮತ್ತು ಅಸಲಿನ ಮೊತ್ತ ನಿರ್ದಿಷ್ಟ ಅವಧಿಯ ನಂತರ ಸುರಕ್ಷಿತವಾಗಿ ಪುನಃ ಕೈ ಸೇರುತ್ತದೆ. ಆದರೆ ಇತ್ತೀಚೆಗೆ ಆರ್ಥಿಕ ರಂಗದಲ್ಲಿ ಗಮನಾರ್ಹ ಬದಲಾವಣೆಗಳಾದ ಕಾರಣ ಠೇವಣಿಗಳ ಮೇಲಿನ ಬಡ್ಡಿ ದರ ಕಡಿಮೆಯಾಗುತ್ತಿದೆ. ಆದರೆ ಇದು ಒಂದು ರೀತಿಯ ಸುರಕ್ಷಿತ ಉಳಿತಾಯವೇ.

ಬಾಂಡ್‌ಗಳು: ಸರ್ಕಾರ ಅಥವಾ ಸರ್ಕಾರದ ಅಂಗ ಸಂಸ್ಥೆಗಳು ತಮಗೆ ಹಣಕಾಸಿನ ನೆರವು ಬೇಕೆನಿಸಿದಾಗ ನಿಗದಿತ ಅವಧಿಯಲ್ಲಿ (10ರಿಂದ 15ದಿನಗಳ ಅವಧಿಯಲ್ಲಿ) ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತವೆ. ಅಲ್ಲದೇ ಆ ಸಂಸ್ಥೆಯ ಆಸ್ತಿಯು, ಸಂಗ್ರಹಿಸಿದ ಮೊತ್ತಕ್ಕೆ ಉತ್ತರದಾಯಿತ್ವವಾಗಿರುತ್ತದೆ. ಹಾಗಾಗಿ ಈ ಬಾಂಡ್‌ಗಳು ಸುರಕ್ಷಿತ ಹೂಡಿಕೆಯ ಮೂಲವಾಗಿರುತ್ತವೆ. ನಿರ್ದಿಷ್ಟ ಅವಧಿಯ ನಂತರ ನಿಗದಿತ ಬಡ್ಡಿಯೊಂದಿಗೆ ಹೂಡಿಕೆದಾರರಿಗೆ ಮೊತ್ತವನ್ನು ನೀಡಲಾಗುತ್ತದೆ.

ಪಿ.ಪಿ.ಎಫ್ (ಸಾರ್ವಜನಿಕ ಭವಿಷ್ಯ ನಿಧಿ): ನಮ್ಮ ದೇಶದಲ್ಲಿ ಹಣಕಾಸು ಇಲಾಖೆಯು ಸಾರ್ವಜನಿಕ ಭವಿಷ್ಯ ನಿಧಿ ಯೋಜನೆಯನ್ನು 1968ರಲ್ಲಿ ಪ್ರಾರಂಭಿಸಿತು. ಅಂಚೆ ಕಛೇರಿಯಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಿ.ಪಿ.ಎಫ್ ಖಾತೆಯನ್ನು ತೆರೆಯಬಹುದು. ಅವಧಿ: 15ವರ್ಷಗಳು. ಪಿಪಿಎಫ್ ಖಾತೆಯಲ್ಲಿ ಹೂಡಿಕೆ ಮಾಡಲಾದ ನಿಧಿಯ ಮೇಲೆ ಮೂರನೇ ವರ್ಷದಿಂದ ಸಾಲವನ್ನು ಪಡೆಯಬಹುದು. ಕನಿಷ್ಠ: ರೂ.100 ಪಾವತಿಸುವ ಮೂಲಕ ಪ್ರಾರಂಭಿಸಬಹುದು. ವಾರ್ಷಿಕ ಕನಿಷ್ಠ ರೂ.500/- ಮತ್ತು ಗರಿಷ್ಠ ರೂ.1,50,000/-. ಕೇಂದ್ರ ಸರ್ಕಾರವು ಬಡ್ಡಿ ದರವನ್ನು ಕಾಲಾನುಕ್ರಮವಾಗಿ ಘೋಷಿಸುತ್ತದೆ. ಈಗ ಬಡ್ಡಿ ದರವನ್ನು ವಾರ್ಷಿಕ ಶೇ.7.8% ರಷ್ಟು ನಿಗದಿಪಡಿಸಿದೆ.

ಉದಾ: ರೂ.500/- ರಂತೆ ಪ್ರತಿ ತಿಂಗಳು ಉಳಿತಾಯ ಮಾಡಿದರೆ ಪ್ರಸ್ತುತ ಬಡ್ಡಿ ದರದಲ್ಲಿ (7.8%) ಲೆಕ್ಕ ಹಾಕಿದರೆ 15ವರ್ಷಗಳ ನಂತರ ರೂ.1,67,175 ಮೊತ್ತವು ಕೈ ಸೇರುತ್ತದೆ.

ಚಿನ್ನದ ಬಾಂಡ್‌ಗಳು: ಉಳಿತಾಯ ಅಥವಾ ಹೂಡಿಕೆಯ ದೃಷ್ಟಿಯಿಂದ ಭೌತಿಕ ಚಿನ್ನವನ್ನು ಕೊಂಡರೆ ನಮ್ಮ ದೇಶದ ಆರ್ಥಿಕತೆಯ ಮೇಲೆ ಅದು ಪರಿಣಾಮ ಬೀರುತ್ತದೆ. ಏಕೆಂದರೆ ನಮ್ಮ ದೇಶವು ಹೆಚ್ಚಿನ ಚಿನ್ನವನ್ನು ಆಮದು ಮಾಡಿಕೊಳ್ಳುವುದರಿಂದ ಚಾಲ್ತಿ ಖಾತೆ ಕೊರತೆಯನ್ನು ಕಾಣುತ್ತೇವೆ.(ದೇಶದ ರಫ್ತು ಪ್ರಮಾಣಕ್ಕಿಂತ ಆಮದು ಪ್ರಮಾಣ ಹೆಚ್ಚಾದಾಗ ಉಂಟಾಗುವ ಆರ್ಥಿಕ ಸಮತೋಲನವೇ ಚಾಲ್ತಿ ಖಾತೆ ಕೊರತೆ-**CAD-Current Account Deficit**). ಆಮದು ಮಾಡಿಕೊಂಡ ಚಿನ್ನವನ್ನು ಡಾಲರ್ ರೂಪದಲ್ಲಿ ವಿನಿಮಯ ಮಾಡುವ ಕಾರಣ, ನಮ್ಮ ರೂಪಾಯಿ ಮೌಲ್ಯ ಕಡಿಮೆಯಿರುವುದರಿಂದ ದೇಶದ ಅರ್ಥ ವ್ಯವಸ್ಥೆಯಲ್ಲಿ ಚಾಲ್ತಿ ಖಾತೆ ಕೊರತೆಯು ಹೆಚ್ಚಾಗುತ್ತದೆ. ಹೀಗೆಯೇ ಮುಂದುವರೆದರೆ ರೂಪಾಯಿ ಮೌಲ್ಯವು ಇನ್ನಷ್ಟು ಕಡಿಮೆಯಾಗಬಹುದು.

ಹಾಗಾಗಿ ಆಭರಣ ರೂಪದಲ್ಲಿ ಚಿನ್ನವನ್ನು ಉಪಯೋಗಿಸುವುದಾದರೆ ಮಾತ್ರ ಭೌತಿಕ ರೂಪದ ಚಿನ್ನವನ್ನು ಖರೀದಿಸಬಹುದು. ಉಳಿತಾಯ ಅಥವಾ ಹೂಡಿಕೆಗಾದರೆ ಚಿನ್ನದ ಬಾಂಡ್‌ಗಳನ್ನು ಖರೀದಿಸುವುದು ಒಳ್ಳೆಯದು. ಕೇಂದ್ರ ಸರ್ಕಾರವು ಉಳಿತಾಯಕ್ಕಾಗಿ ಚಿನ್ನದ ಬಾಂಡ್‌ಗಳನ್ನು ಹಂತ ಹಂತವಾಗಿ ಬಿಡುಗಡೆಗೊಳಿಸುತ್ತಿದೆ. 2015ರ ನವೆಂಬರ್‌ನಿಂದ ಪ್ರಾರಂಭವಾದ ಚಿನ್ನದ ಬಾಂಡ್ ಯೋಜನೆಯಲ್ಲಿ ಇದುವರೆಗೆ 8ಹಂತಗಳಲ್ಲಿ ಬಾಂಡ್‌ಗಳನ್ನು ಬಿಡುಗಡೆ ಮಾಡಿದೆ.

ಚಿನ್ನದ ಬಾಂಡ್‌ಗಳ ಪ್ರಯೋಜನಗಳು: ಕನಿಷ್ಠ ಒಂದು ಗ್ರಾಂ ದಿಂದ ಗರಿಷ್ಠ 500ಗ್ರಾಂ ಗಳವರೆಗೆ ಒಂದು ಆರ್ಥಿಕ ವರ್ಷದಲ್ಲಿ ಉಳಿತಾಯ ಮಾಡಬಹುದು.

ಅವಧಿ: 8ವರ್ಷಗಳ ಅವಧಿ. ಅವಶ್ಯವೆನಿಸಿದರೆ 5ವರ್ಷಗಳ ನಂತರ ಹಿಂಪಡೆಯಬಹುದು. ಶೇ.2.75% ರ ವಾರ್ಷಿಕ ಬಡ್ಡಿಯನ್ನು ನಿಗದಿಪಡಿಸಲಾಗಿದೆ. ಗಳಿಸಿದ ಬಡ್ಡಿಯನ್ನು ಅರ್ಧವಾರ್ಷಿಕವಾಗಿ ಹೂಡಿಕೆದಾರರಿಗೆ ಮರಳಿಸಲಾಗುತ್ತದೆ.

ಪೆನ್ಷನ್ ಯೋಜನೆಗಳು: ಇಂದಿನ ಆಧುನಿಕ ಯುಗದಲ್ಲಿ ಅವಿಭಕ್ತ ಕುಟುಂಬಗಳು ಮಾಯವಾಗಿ ಸಣ್ಣ ಕುಟುಂಬಗಳಾಗುತ್ತಿವೆ. ಹಾಗೂ ಸುಧಾರಿತ ವೈದ್ಯಕೀಯ ಸೌಲಭ್ಯಗಳಿಂದ ಮನುಷ್ಯನ ಆಯುಷ್ಯವೂ ವೃದ್ಧಿಯಾಗುತ್ತಿದೆ. ಜೀವನದ ಸಂಧ್ಯಾಕಾಲದಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ಹಾಗೂ ಸ್ವಾವಲಂಬಿ ಬದುಕು ಸಾಗಿಸಲು, ಆರ್ಥಿಕವಾಗಿ ಸದೃಢವಾಗಿರಲು ಪಿಂಚಣಿಗಾಗಿ ಉಳಿತಾಯ ಮಾಡುವುದು ಅವಶ್ಯ.

ಲಭ್ಯವಿರುವ ಪಿಂಚಣಿ ಯೋಜನೆಗಳು: ಎನ್.ಪಿ.ಎಸ್.(ರಾಷ್ಟ್ರೀಯ ಪಿಂಚಣಿ ಯೋಜನೆ). ಎಲ್.ಐ.ಸಿ.ಯ ಜೀವನ್ ನಿಧಿ ಪಿಂಚಣಿ ಯೋಜನೆ. ಈ ಎರಡೂ ಯೋಜನೆಗಳಲ್ಲಿ ನಿರ್ದಿಷ್ಟಪಡಿಸಿದ ಅವಧಿಯವರೆಗೆ ಉಳಿತಾಯ ಮಾಡುವುದು, ಅವಧಿಯ ನಂತರ ಪಿಂಚಣಿಯನ್ನು ಮಾಸಿಕವಾಗಿ ಪಡೆಯಬಹುದು. ಏಕ ಕಂತಿನಲ್ಲಿ ಪಾವತಿಸಿ ತಕ್ಷಣದಿಂದ ಪಿಂಚಣಿ ಪಡೆಯುವ ಯೋಜನೆಗಳು ಪಿ.ಎಂ.ವಿ.ವಿ.ವೈ.(ಪ್ರಧಾನ ಮಂತ್ರಿ ವಯ ವಂದನಾ ಯೋಜನೆ) ಈ ಯೋಜನೆ ಅಡಿಯಲ್ಲಿ ಹಿರಿಯ ನಾಗರಿಕರಿಗೆ (60ವರ್ಷ ಮೇಲ್ಪಟ್ಟ) ವಾರ್ಷಿಕ ಶೇ.8.3ರ ದರದಿಂದ 8ರ ದರದಲ್ಲಿ ಪಿಂಚಣಿ ಪಡೆಯುವ ಅವಕಾಶವಿದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಮೂಲಕ 4ನೇ ಮೇ 2017ರಿಂದ ಜಾರಿಗೊಳಿಸಲಾಗಿದೆ.

ಎಲ್.ಐ.ಸಿ.ಯ ಜೀವನ್ ಅಕ್ಷಯ್ ಕೂಡಾ ನಿಗದಿತ ಹಾಗೂ ನಿರ್ದಿಷ್ಟ ದರದ ಪಿಂಚಣಿ ನೀಡುವ ಯೋಜನೆಯಾಗಿದೆ. ಈ ಯೋಜನೆಯಲ್ಲಿ 30ವರ್ಷ ಮೇಲ್ಪಟ್ಟವರು ಸೇರಬಹುದು. ಶೇ.6.9 ರಿಂದ 7.5ರ ದರದಲ್ಲಿ ಪಿಂಚಣಿಯು ದೊರೆಯುತ್ತದೆ.

ಹೀಗೆ ನಿಮ್ಮ ಉಳಿತಾಯದ ಮೊತ್ತವು ಸಂದರ್ಭಕ್ಕೆ ಅನುಸಾರವಾಗಿ ಉಪಯೋಗವಾಗುವಂತೆ ಯೋಜನೆ ಹಾಕಿಕೊಂಡು ಉಳಿತಾಯ ಮಾಡಿ. ಅದರಲ್ಲೂ ಜೀವ ವಿಮೆಗೆ ಹೆಚ್ಚಿನ ಮಹತ್ವ ನೀಡಿ. ●